ಪ್ರಬಂಧ

# ಉಂಡು ಮಲಗಿ ಜಗಳ ಮುಗಿಸಲಾದೀತೇ?

■ ವಸುಂಧರಾ ಕದಲೂರು

**‘ಗಂಡ ಹೆಂಡಿರ ಜಗಳ ಉಂಡು ಮಲಗುವ ತನಕ’** ಎಂದು ದಂಪತಿ ಮಲಗುವ ಕೋಣೆಯೊಳಗೆ ಹೋಗದ ಸಭ್ಯಸ್ಥರು, ಜಗಳ ಮುಗಿಯಿತು ಎಂದು ಪರೋಕ್ಷವಾಗಿ ಷರಾ ಬರೆದು ನಿರುಮ್ಮಳಾಗಿಬಿಟ್ಟರು. ಜಗಳ ಅಂತ್ಯವಾಯಿತೇ ಅಥವಾ ಇನ್ನೊಂದು ಹೊಸ ಜಗಳ ಆರಂಭವಾಯಿತೇ ಎನ್ನುವುದನ್ನು ಕಂಡವರಾರು?

ಯಾರದೋ ಮಲಗುವ ಕೋಣೆಯೊಳಗೆ ಇಣುಕಿ ಜಗಳ ಮುಗಿಯಿತೇ ಇಲ್ಲವೇ ಎಂದು ಕಾಣಲು ಸಾಧ್ಯವೇ! ಇರಲಿ ಬಿಡಿ, ದಂಪತಿ ಒಂದಾಗಲಿ, ಅವರ ದಾಂಪತ್ಯ ಜೀವನ ಸುಖಮಯವಾಗಿರಲಿ ಎಂಬ ಆಶಾಭಾವನೆಯಿಂದ ಮಲಗುವ ಕೋಣೆಯಲ್ಲಿ ಜಗಳ ಮುಗಿಯಿತೆಂದು ಹಿರಿಯರು ಹೇಳಿರುವುದನ್ನು ಪ್ರಶ್ನಿಸುತ್ತಾ ಮೊಸರಲ್ಲಿ ಕಲ್ಲು ಹುಡುಕುವ ಕೆಲಸ ಮಾಡಿ, ಮತ್ತೊಂದು ಜಗಳಕ್ಕೆ ಶುರು ಹಚ್ಚಿಕೊಳ್ಳುವುದು ಬೇಡ. ‘ಸಂಸಾರವೆಂಬ ಹೆಣ ಬಿದ್ದಿರೆ ತಿನ ಬಂದ ನಾಯ ಜಗಳವ ನೋಡಿರೆ! ನಾಯ ಜಗಳವ ನೋಡಿ ಹೆಣನೆದ್ದು ನಗುತ್ತಿರೆ ಗುಹೇಶ್ವರನೆಂಬ ಲಿಂಗವಲ್ಲಿಲ್ಲ ಕಾಣಿರೆ’ ಎಂದು ಜಗಳಕ್ಕೂ ಸಂಸಾರಕ್ಕೂ ಇರುವ ಅವಿನಾಭಾವ ಸಂಬಂಧದ ಕುರಿತು ಅಲ್ಲಮಪ್ರಭುವೇ ಹೇಳಿದ್ದಾರಲ್ಲವೇ ಎಂದು ವಿತಂಡವಾದ ಮಂಡಿಸುವುದು ಬೇಡ. ಅಷ್ಟಕ್ಕೂ ‘ಗಂಡ ಹೆಂಡಿರ ಜಗಳ ಗಂಧ ತೀಡಿದಂಗ’ ಇದ್ದು ಒಲವಿನ ಪರಿಮಳ ಪಸರಿಸುವಂತೆ ಇರಬೇಕೆನ್ನುವುದು ಸುಖ ದಾಂಪತ್ಯದ ಆಶಯ. ಆದರೆ, ಉಂಡು ಮಲಗಿದ ತಕ್ಷಣ ‘ಶುಭಂ’ ಎಂದು ಮುಕ್ತಾಯವಾಗಲು ಜಗಳವು ಎರಡೂವರೆ ಗಂಟೆಗಳ ಸಿನಿಮಾ ಅಲ್ಲವಲ್ಲ?

ಮಾನವ ಸಮಾಜಜೀವಿ, ಸಂಘಜೀವಿ ಎಂದೆಲ್ಲಾ ವಿಶೇಷಣ ಕೊಟ್ಟುಕೊಂಡರೂ ಸುಮ್ಮನೇ ಕಾದಾಡಿಕೊಳ್ಳುವುದು ಲಾಗಾಯ್ತಿನಿಂದ ಮನುಷ್ಯ ಸಂಕುಲಕ್ಕೆ ಬಂದ ಗುಣ ಇರಬಹುದೇ? ‘ಹುಟ್ಟುಗುಣ ಸುಟ್ಟರೂ ಹೋಗೋಲ್ಲ’ ಎನ್ನುತ್ತಾರಲ್ಲಾ ಹಾಗೆ, ಹಸಿವು, ಕಾಮ, ನಿದ್ರೆ ಇತ್ಯಾದಿ ಮೂಲ ಅಗತ್ಯಗಳನ್ನು ಹೊರತುಪಡಿಸಿಯೂ ಕಾಲು ಕೆರೆದೋ ಕಿತಾಪತಿ ಮಾಡಿಯೋ ಜಗಳ ಹಚ್ಚಿಕೊಳ್ಳುವವರು ಮನುಷ್ಯರಲ್ಲವೇ? ಮಾನವರೇ ಪ್ರಕೃತಿಯ ಅಧ್ಯಯನ ಮಾಡಿ ರಚಿಸಿಕೊಂಡ ‘ಸರ್ವೈವಲ್ ಆಫ್ ದಿ ಫಿಟೆಸ್ಟ್’ ಹಾಗೂ ‘ಸ್ಟ್ರಗಲ್ ಫಾರ್ ಎಕ್ಸಿಸ್ಟೆನ್ಸಿ’ ಎಂಬ ಥಿಯರಿಗಳು ಹೇಳುವುದೂ ಜಗಳದ ಬಗ್ಗೆಯೇ. ಜಗಳದ ಉಲ್ಲೇಖ ಇಲ್ಲದೆ ಮುಗಿದಂತಹ ನಮ್ಮ ಪುರಾಣ, ಇತಿಹಾಸಗಳ ಉದಾಹರಣೆಗಳು ಇವೆಯೇ? ಎಲ್ಲವೂ ಶಾಂತ ರೀತಿಯಿಂದ ನಡೆಯುತ್ತಿದ್ದರೆ ‘ಕಲಹಪ್ರಿಯ’ ನಾರದರು ಸುಮ್ಮನಿದ್ದಾರೆಯೇ? ನಡುವೆ ಕಡ್ಡಿ ಆಡಿಸಿ, ಅಲ್ಲಿಂದಿಲ್ಲಿಗೆ ತಂದಿಟ್ಟು ಜಗಳಕ್ಕೆ ನಾಂದಿ ಹಾಡದೇ ಇರುತ್ತಾರೆಯೇ? ನಾರದರ ಕೀರ್ತಿಯೇ ಕಲಹಪ್ರಿಯ ಎಂದು ಹಬ್ಬಿ ಹರಡಿರುವಾಗ, ಹೀಗೆ ಬರೆದವರಿಗೆ ಧಮಕಿ ಹಾಕಬಾರದೆಂದು ನಿರೀಕ್ಷಣಾ ಜಾಮೀನು ಪಡೆಯಬೇಕಾಗಬಹುದು.

ಜಗಳ ಅಂದರೆ ಏನು? ಎಂದು ಕೇಳುವವರು ಈ ಲೋಕದ ಜೀವಿಗಳೇ ಅಲ್ಲ ಎಂದು ಭಾರತೀಯರು ಹೇಳಿಯಾರು. ಏಕೆಂದರೆ, ಹುಟ್ಟಿದಾರಭ್ಯ ನೀರು, ಕರೆಂಟು, ರೇಷನ್ನು, ಆರೋಗ್ಯ, ಬಸ್ಸಿನ ಸೀಟು, ಶಾಲೆ ಸೀಟು ಇಷ್ಟೇ ಏಕೆ, ದೇಶದ ವಿಧಿ ಬರೆಯುವ ಮಂತ್ರಿ ಸೀಟನ್ನು ಪಡೆಯಬೇಕಾದರೂ ಜಗಳ ಮಾಡಬೇಕಾದ ಅನಿವಾರ್ಯ ಕರ್ಮ ಭಾರತೀಯರದ್ದಲ್ಲವೇ. ಹಾಗಾಗಿ ಜಗಳದ ಬಗ್ಗೆ



**ಎಲ್ಲಿಯವರೆಗೆ ನಮ್ಮ ಜನರು ‘ಎರಡು ಜಡೆ ಸೇರೋಲ್ಲ’ ಎನ್ನುವ ಮನೋಭಾವ ಇಟ್ಟುಕೊಂಡು ಧಾರಾವಾಹಿಗಳನ್ನು ಚಿತ್ರೀಕರಿಸುತ್ತಾರೆಯೋ ಅಲ್ಲಿಯವರೆಗೆ ‘ಜಗಳಂ ಸರ್ವಾಂತರ್ಯಾಮಿ’ ಎನ್ನಬಹುದು. ಇಲ್ಲಿಯೂ ಲಿಂಗತಾರತಮ್ಯ ಕಾಣಬಹುದು. ಹೆಣ್ಣುಮಕ್ಕಳು ಮಾತ್ರ ಜಗಳಕ್ಕಾಗಿ ಯಾವಾಗಲೂ ಹಪಹಪಿಸುತ್ತಾರೆನ್ನುವ ಧೋರಣೆಯನ್ನು ನಿಚ್ಚಳವಾಗಿ ಗುರುತಿಸಬಹುದು.**